# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

**"ಅಭಿವೃದ್ಧಿ ಭವನ"** ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527

Email: hkadbgulb@gmail.com Website: hkrdb.kar.nic.in


ಸಂಖ್ಯೆ:ಕಕಪ್ರಅಮಂ/ಯೋಶಾ/ಸನಿ/ಕ್ರಿಯೋ/01/2023-24/8541 ದಿನಾಂಕ:19 .01.2024.

::ಸುತ್ತೋಲೆ::

ವಿಷಯ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 'ಅಕ್ಷರ ಆವಿಷ್ಕಾರ' ಸಮಗ್ರ ಶಾಲಾ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಆಯ್ದ ಶಾಲೆಗಳನ್ನು ಮಾದರಿ ಶಾಲೆಗಳನ್ನಾಗಿ ಮಾಡಲು- ಅನುಷ್ಠಾನದ ಮಾರ್ಗಸೂಚಿ.

ಉಲ್ಲೇಖ: ಮಂಡಳಿಯ ಸುತ್ತೋಲೆ ಸಂ:ಕಕಪ್ರಅಮಂ/ಯೋಶಾ/ಸನಿ/ಕ್ರಿಯೋ/01/2023-24/3493 ದಿನಾಂಕ:21.09.2023.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶವಾದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಮಗ್ರ ಶಾಲಾ ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು 2023-24ರ ವರ್ಷವನ್ನು 'ಶೈಕ್ಷಣಿಕ ವರ್ಷ' ವೆಂದು ಘೋಷಿಸಿದೆ. ಮಂಡಳಿಗೆ ವಾರ್ಷಿಕವಾಗಿ ಬಿಡುಗಡೆಯಾಗುವ ಅನುದಾನದಲ್ಲಿ (ಮೈಕ್ರೊ ಮತ್ತು ಮ್ಯಾಕ್ರೊ) ಪ್ರತಿಶತ 25% ರಷ್ಟು ಅನುದಾನವನ್ನು ಶಿಕ್ಷಣ ವಲಯದ ಸಮಗ್ರ ಅಭಿವೃದ್ಧಿಗಾಗಿ (ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು) 'ಅಕ್ಷರ ಆವಿಷ್ಕಾರ' ಎಂಬ ಕಾರ್ಯಕ್ರಮವನ್ನು ರೂಪಿಸಿದೆ. ಪ್ರಸ್ತುತ 2023-24ನೇ ಸಾಲಿನಲ್ಲಿ ಕಲಬುರಗಿ ವಿಭಾಗಕ್ಕೆ ಮೈಕ್ರೊ ಯೋಜನೆಯಡಿ ರೂ. 456.75 ಕೋಟಿ ಹಾಗೂ ಮ್ಯಾಕ್ರೊ ಯೋಜನೆಯಡಿ ರೂ. 195.75 ಕೋಟಿ ಅನುದಾನವನ್ನು ನಿಗದಿಪಡಿಸಿದೆ.

ಉಲ್ಲೇಖದನ್ವಯ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 'ಅಕ್ಷರ ಆವಿಷ್ಕಾರ' ಸಮಗ್ರ ಶಾಲಾ ಅಭಿವೃದ್ಧಿ ಕಾರ್ಯಕ್ರಮ-ಅನುಷ್ಠಾನದ ಮಾರ್ಗಸೂಚಿಯ ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 'ಅಕ್ಷರ ಆವಿಷ್ಕಾರ' ಸಮಗ್ರ ಶಾಲಾ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಆಯ್ದ ಶಾಲೆಗಳನ್ನು ಮಾದರಿ ಶಾಲೆಗಳನ್ನಾಗಿ ಮಾಡಲು ಈ ಕೆಳಗಿನ 10 ಅಂಶಗಳು ಅವಶ್ಯಕತೆ ಇರುತ್ತವೆ.

1. <u>ಗೋಡೆ ಸುರಕ್ಷತೆಗಾಗಿ ಕಟ್ಟಡದ ಸುತ್ತಲೂ ಕಲ್ಲುಚಪ್ಪಡಿ (Flagging) ವ್ಯವಸ್ಥೆ:</u>

   ಮಳೆ ನೀರಿನಿಂದ ಗೋಡೆಗಳನ್ನು ಸಂರಕ್ಷಿಸಲು ಗೋಡೆಯ ಸುತ್ತ ಮುತ್ತ ಹೊರಭಾಗದಲ್ಲಿ ಕಲ್ಲುಗಳನ್ನು, ಇಟ್ಟಿಗೆಗಳನ್ನು ಅಥವಾ ಸಿಮೆಂಟ್ ಕಾಂಕ್ರಿಟ್ ಹಾಕುವುದು. ಇದರಿಂದ ಗೋಡೆಗಳಿಗೆ ಮಳೆಯ ನೀರು ಅಥವಾ ಇತರೆ ನಿರುಪಯುಕ್ತ ನೀರು ತಗುಲಿ ಹಾಳಾಗುವುದನ್ನು ತಪ್ಪಿಸಬಹುದು. ಶಾಲಾ ಕಟ್ಟಡದ ಗೋಡೆಗಳ ಮೇಲೆ ಫ್ಲ್ಯಾಶಿಂಗ್ ಅಳವಡಿಸುವುದು ಮಳೆ ನೀರು ಕಟ್ಟಡದ ಒಳಗೆ ಹರಿದು ಬಾರದಿರಲು ತುಂಬಾ ಮುಖ್ಯವಾಗಿದೆ.

2. <u>ವಾಟರ್ ಪ್ರೂಫಿಂಗ್ (ಛಾವಣಿ) Water Proofing (Roof):</u>

   ಶಾಲಾ ಕಟ್ಟಡಗಳಿಗೆ ನೀರು ನಿರೋಧಕತೆಯು ಅತ್ಯಂತ ಮುಖ್ಯವಾದ ಅಂಶವಾಗಿದೆ. <u>ವಾಟರ್ ಪ್ರೂಫಿಂಗ್ (ಛಾವಣಿ) WATER PROOFING (ROOF) ಮಾಡುವುದರಿಂದ</u> ಕಟ್ಟಡವನ್ನು ಹಲವಾರು

ರೀತಿಯಲ್ಲಿ ರಕ್ಷಿಸುತ್ತದೆ ಮತ್ತು ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಆರೋಗ್ಯಕರವಾದ ಕಲಿಕೆಯ ಪರಿಸರವನ್ನು ಒದಗಿಸುತ್ತದೆ.

3. <u>ಮೇಲ್ಛಾವಣಿಯ ಸುತ್ತ ಗೋಡೆ (Parapet Wall):</u>

ಶಾಲಾ ಕಟ್ಟಡದಲ್ಲಿ ಪಾರಪೆಟ್ ಗೋಡೆಯು ಹಲವಾರು ಕಾರಣಗಳಿಗಾಗಿ ಅತ್ಯಂತ ಮುಖ್ಯವಾದ ಅಂಶವಾಗಿದೆ. ಇದು ವಿದ್ಯಾರ್ಥಿಗಳ ಸುರಕ್ಷತೆ, ಕಟ್ಟಡದ ರಚನಾತ್ಮಕ ಸಮಗ್ರತೆ ಮತ್ತು ಸೌಂದರ್ಯದ ವಿಷಯದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಹಾಗೂ ಆಯ್ಕೆಯಾದ ಶಾಲೆಗಳಲ್ಲಿ ಪ್ಯಾರಪೆಟ್ ಗೋಡೆಯ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವುದು.

4. <u>ಪೇಂಟಿಂಗ್ (Painting):</u>

ಶಾಲೆಯ ವಾತಾವರಣವು ವಿದ್ಯಾರ್ಥಿಗಳ ಕಲಿಕೆ, ಬೆಳವಣಿಗೆ ಮತ್ತು ಒಟ್ಟಾರೆ ಶಿಕ್ಷಣದ ಅನುಭವದ ಮೇಲೆ ಗಮನಾರ್ಹ ಪರಿಣಾಮವನ್ನು ಬೀರುತ್ತದೆ. ಈ ವಾತಾವರಣದ ಪ್ರಮುಖ ಅಂಶವೆಂದರೆ ಗೋಡೆಗಳ ಬಣ್ಣ. ಸೂಕ್ತವಾದ ಬಣ್ಣಗಳು ವಿದ್ಯಾರ್ಥಿಗಳ ಮನಸ್ಥಿತಿ, ಏಕಾಗ್ರತೆ ಮತ್ತು ಕಲಿಕೆಯನ್ನು ಉತ್ತೇಜಿಸಬಹುದು, ಆದರೆ ತಪ್ಪು ಬಣ್ಣಗಳು ವಿರುದ್ಧ ಪರಿಣಾಮವನ್ನು ಉಂಟುಮಾಡಬಹುದು. ಹಾಗಾಗಿ, ಆಯ್ಕೆಯಾದ ಶಾಲಾ ಕೊಠಡಿಗಳ ಗೋಡೆಗಳಿಗೆ ಸೂಕ್ತವಾದ ಬಣ್ಣಗಳು ಹಚ್ಚುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಆಯ್ಕೆಯಾದ ಶಾಲಾ ಕೊಠಡಿಗಳ ಗೋಡೆಗಳಿಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ತಿರ್ಮಾನಿಸಲಾದ ಬಣ್ಣಗಳು ಹಚ್ಚಲು ಕ್ರಮಕೈಗೊಳ್ಳುವುದು.

5. <u>ಬಾಗಿಲ ಮತ್ತು ಕಿಟಕಿ (All Doors –Windows):</u>

ಶಾಲಾ ಕಟ್ಟಡದಲ್ಲಿ ಬಾಗಿಲು ಮತ್ತು ಕಿಟಕಿಗಳು ಕೇವಲ ಪ್ರವೇಶದ್ವಾರಗಳಲ್ಲ, ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಯ ಸುರಕ್ಷತೆ, ಆರೋಗ್ಯ, ಕಲಿಕೆ ಮತ್ತು ಒಟ್ಟಾರೆ ಶಾಲಾ ಪರಿಸರಕ್ಕೆ ಅತ್ಯಂತ ಮುಖ್ಯವಾದ ಅಂಶಗಳಾಗಿವೆ. ಆದ್ದರಿಂದ ಆಯ್ಕೆಯಾದ ಶಾಲಾ ಕಟ್ಟಡಗಳಲ್ಲಿ ಬಾಗಿಲು ಮತ್ತು ಕಿಟಕಿಗಳನ್ನು ಸೂಕ್ತವಾಗಿ ರಿಪೇರಿ ಮಾಡಿಸುವುದು ಹಾಗೂ ಅವುಗಳ ನಿರ್ವಹಣೆಯನ್ನು ಕೈಗೊಳ್ಳುವುದು.

6. <u>ವಿದ್ಯುತ್ ವ್ಯವಸ್ಥೆ (Electricity, Lights and Fans):</u>

ಶಾಲೆಯಲ್ಲಿ ವಿದ್ಯುತ್ ವ್ಯವಸ್ಥೆ, ಫ್ಯಾನ್‌ಗಳು ಮತ್ತು ಬೆಳಕು ಕೇವಲ ಮೂಲಭೂತ ಸೌಕರ್ಯಗಳಲ್ಲ, ವಿದ್ಯಾರ್ಥಿಗಳ ಕಲಿಕೆ, ಆರೋಗ್ಯ, ಸುರಕ್ಷತೆ ಮತ್ತು ಒಟ್ಟಾರೆ ಶಾಲಾ ಅನುಭವದ ಮೇಲೆ ಗಮನಾರ್ಹವಾದ ಪ್ರಭಾವ ಬೀರುವ ಅತ್ಯಂತ ಮುಖ್ಯವಾದ ಅಂಶಗಳಾಗಿವೆ. ಆದ್ದರಿಂದ ಆಯ್ಕೆಯಾದ ಶಾಲೆಯಲ್ಲಿ ಸಮರ್ಪಕ ವಿದ್ಯುತ್ ವ್ಯವಸ್ಥೆ, Lights and Fans ಇರುವ ಕುರಿತು ಖಚಿತಪಡಿಸಿಕೊಳ್ಳುವುದು. ಇಲ್ಲದಿದ್ದರೆ ಸಮರ್ಪಕ ವಿದ್ಯುತ್, Lights and Fans ವ್ಯವಸ್ಥೆಯನ್ನು ಕಲ್ಪಿಸಲು ಕ್ರಮಕೈಗೊಳ್ಳುವುದು.

7. <u>ಕುಡಿಯುವ ನೀರು (Drinking Water):</u>

ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವು ಕೇವಲ ಮೂಲಭೂತ ಅಗತ್ಯವಲ್ಲ, ವಿದ್ಯಾರ್ಥಿಗಳ ಆರೋಗ್ಯ, ಕಲಿಕೆ ಮತ್ತು ಒಟ್ಟಾರೆ ಬೆಳವಣಿಗೆಗೆ ಅತ್ಯಂತ ಮುಖ್ಯವಾದ ಅಂಶವಾಗಿದೆ. ಆದ್ದರಿಂದ ಶಾಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರುವ ಕುರಿತು ಖಚಿತಪಡಿಸಿಕೊಳ್ಳುವುದು. ಇಲ್ಲದಿದ್ದರೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮಕೈಗೊಳ್ಳುವುದು.

8. **LKG & UKG Class (Early Childhood Care and Education):**

ಮಕ್ಕಳಿಗಾಗಿ ರೂಪಿಸಲಾದ ಅತ್ಯಂತ ನಿರ್ಣಾಯಕ ಸ್ಥಳಗಳಲ್ಲಿ ಸರ್ಕಾರಿ ಶಾಲೆಗಳ LKG ಮತ್ತು UKG ತರಗತಿ ಕೊಠಡಿಗಳು ಪ್ರಮುಖವಾದವು. ಈ ಸಣ್ಣ ವಯಸ್ಸಿನಲ್ಲಿ, ಮಕ್ಕಳು ತಮ್ಮ ಕಲಿಕೆಯ ಪ್ರಯಾಣವನ್ನು ಪ್ರಾರಂಭಿಸುತ್ತಾರೆ. ಸಕಾರಾತ್ಮಕ ಮತ್ತು ಉತ್ತೇಜಕ ಕಲಿಕೆಯ ಪರಿಸರವನ್ನು ಒದಗಿಸುವುದು ಅವರ ಬೆಳವಣಿಗೆಗೆ ಅತ್ಯಂತ ಮುಖ್ಯವಾದುದು. ಆದ್ದರಿಂದ ಆಯ್ಕೆಯಾದ ಶಾಲೆಗಳಲ್ಲಿ LKG ಮತ್ತು UKG ತರಗತಿಗಾಗಿ ಕೊಠಡಿ ಸಮೇತ ಮೂಲಭೂತ ಸೌಕರ್ಯಗಳನ್ನು ಖಾತ್ರಿಪಡಿಸಿಕೊಂಡು, ಸರ್ಕಾರದ ಮಾರ್ಗಸೂಚಿಯನ್ವಯ ಓರ್ವ ಪೂರ್ವ-ಪ್ರಾಥಮಿಕ ಶಿಕ್ಷಕ(ಕಿ)ಯನ್ನು ಸಹ ನೇಮಕ ಮಾಡಿಕೊಳ್ಳುವುದು.

9. **ದ್ವಿಭಾಷಾ ಶಾಲೆಗಳು (English Medium School):**

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿ ಕೊಠಡಿಗಳನ್ನು ನಿರ್ವಹಿಸುವುದು ವಾಸ್ತವಿಕ ಸವಾಲುಗಳನ್ನು ಹೊಂದಿದೆ. ಆದರೆ, ಸರಿಯಾದ ಕ್ರಮಗಳು ಮತ್ತು ವ್ಯವಸ್ಥೆಗಳೊಂದಿಗೆ, ಪರಿಣಾಮಕಾರಿ ಕಲಿಕಾ ಪರಿಸರವನ್ನು ಸೃಷ್ಟಿಸಬಹುದು ಮತ್ತು ಆಯ್ಕೆಯಾದ ಶಾಲೆಗಳಲ್ಲಿ ಸಕಾರದ ಮಾರ್ಗಸೂಚಿಯನ್ವಯ ದ್ವಿಭಾಷಾ ತರಗತಿ ಕೊಠಡಿಗಳ ವ್ಯವಸ್ಥೆಯನ್ನು ಕಲ್ಪಿಸುವುದು.

10. **ಕಂಪ್ಯೂಟರ್ ಲ್ಯಾಬ್‌ಗಳಿಗೆ ಇಂಟರ್ನೆಟ್ ಸೌಲಭ್ಯ (Computer Labs with Internet Facility and Computer Instructor) :**

ಇಂಟರ್ನೆಟ್ ಇಂದಿನ ಜಗತ್ತಿನಲ್ಲಿ ಅತ್ಯಂತ ಅವಶ್ಯಕವಾದ ಸಾಧನವಾಗಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಪ್ರಭಾವ ಬೀರುತ್ತದೆ. ಇಂಟರ್ನೆಟ್ ವಿಶ್ವವಿದ್ಯಾಲಯದಷ್ಟು ಜ್ಞಾನದ ಮೂಲವಾಗಿದೆ. ವಿದ್ಯಾರ್ಥಿಗಳು ಪಠ್ಯಪುಸ್ತಕದಿಂದ ಮೀರಿ, ವಿವಿಧ ವಿಷಯಗಳ ಕುರಿತು ಲೇಖನಗಳು, ವೀಡಿಯೊಗಳು, ಇ-ಬುಕ್‌ಗಳು ಇತ್ಯಾದಿಗಳ ಮೂಲಕ ಅವರ ಜ್ಞಾನವನ್ನು ವಿಸ್ತರಿಸಬಹುದು. ಆದ್ದರಿಂದ ಆಯ್ಕೆಯಾದ ಶಾಲೆಗಳಲ್ಲಿ ಇಂಟರನೆಟ್ ವ್ಯವಸ್ಥೆಯನ್ನು ಕಲ್ಪಿಸುವುದು. ಜೊತೆಗೆ ಸರ್ಕಾರದ ಮಾರ್ಗಸೂಚಿಗಳನ್ವಯ ಓರ್ವ ಕಂಪ್ಯೂಟರ ಶಿಕ್ಷಕರನ್ನು ಸಹ ಸ್ಥಳೀಯವಾಗಿ ನೇಮಕ ಮಾಡಬಹುದಾಗಿದೆ.

ಈ ಕಾರ್ಯಕ್ರಮವು ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಪಡಿಸುವ ಗುರಿ ಹೊಂದಿರುವ ಹಿನ್ನಲೆಯಲ್ಲಿ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಕಲ್ಯಾಣ ಕರ್ನಾಟಕದ ಎಲ್ಲಾ ಶಾಲೆಗಳು ಮಾದರಿ ಶಾಲೆಗಳನ್ನಾಗಿ ಮಾಡಲು ಮೇಲ್ಕಂಡ 10 ಅಂಶಗಳು ಅವಶ್ಯಕತೆ ಇರುತ್ತವೆ. ಆದ್ದರಿಂದ ಅಕ್ಷರ ಆವಿಷ್ಕಾರ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಆಯ್ದ ಶಾಲೆಗಳಲ್ಲಿ ಮೇಲ್ಕಂಡ 10 ಅಂಶಗಳು ಇರುವ ಕುರಿತು ಖಚಿತಪಡಿಸಿಕೊಳ್ಳುವುದು, ಯಾವ ಶಾಲೆಯಲ್ಲಿ ಈ 10 ಅಂಶಗಳು ಇರುವುದಿಲ್ಲವೋ ಆ ಶಾಲೆಗಳಲ್ಲಿ ಅವಶ್ಯಕತೆಗಳ ಅನುಗುಣವಾಗಿ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಮಾದರಿ ಶಾಲೆಗಳನ್ನಾಗಿ ಮಾಡಲು ಪ್ರತಿ ಹಂತದಲ್ಲಿಯು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಎಲ್ಲಾ ಅನುಷ್ಠಾನಾಧಿಕಾರಿಗಳು ಜವಬ್ದಾರಿಯಿಂದ ಕಾರ್ಯಪ್ರವೃತ್ತರಾಗಲು ಈ ಮೂಲಕ ತಿಳಿಸಲಾಗಿದೆ.

19/01/2024

ಕಾರ್ಯದರ್ಶಿಗಳು
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ
ಮಂಡಳಿ, ಕಲಬುರಗಿ.

ಪ್ರತಿಗಳನ್ನು:

1. ವಿಭಾಗದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.
3. ವಿಭಾಗದ ಎಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು (ಆಡಳಿತ) ರವರಿಗೆ.
4. ವಿಭಾಗದ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ.
5. ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
6. ವಿಭಾಗದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ.

ಪ್ರತಿಗಳನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತ ಇಲಾಖೆ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ ಮತ್ತು ಸಾಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
3. ವಿಭಾಗದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
4. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ಇವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಅಧ್ಯಕ್ಷರ ಅವಗಾಹನೆಗೆ ತರಲು ಕೋರಿದೆ.
5. ಕಛೇರಿ ಪ್ರತಿ.